ಬಂದಂಥ ಅಪ್ಲಿಕೇಶನ್ಸ್‌ನ್ನು ಅವರಿಗೆ ನಾವು ರವಾನಿಸಿದ್ದೇವೆ. ಉಳಿದಂಥ ಆರ್ಜಿಗಳನ್ನು ಅವರು ನಮಗೆ ಏನು ಮಾಹಿತಿ ಬೇಕೋ ಅದನ್ನು ಒದಗಿಸಿದಲ್ಲಿ ಆದಷ್ಟು ಜಾಗ್ರತೆ ಇದನ್ನು ಇತ್ಯರ್ಥ ಮಾಡುತ್ತೇವೆ.

ವಿಷಯ :- ಮೈಸೂರಿನ ಡಿ. ಬನುಮಯ್ಯ ಸಂಜೆ ಕಾಲೇಜಿಗೆ ಅನುದಾನ ಹಾಗೂ ಮಾನ್ಯತೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 104(167)

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ)

ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರಿನಲ್ಲಿರುವ ಡಿ.ಬನುಮಯ್ಯ ಸಂಜೆ ಕಾಲೇಜಿನವರು ಅನುದಾನ ಮಾನ್ಯತೆ ಕೋರಿ ಶಿಕ್ಷಣ ಇಲಾಖೆಗೆ ಪ್ರಸ್ತಾವನೆ ಕಳುಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಡಿ. ಬನುಮಯ್ಯ ಸಂಜೆ ಕಾಲೇಜಿನವರು ಅನುದಾನ ಪಡೆಯಲು ಎಲ್ಲಾ ನಿಯಮಗಳು ಮತ್ತು ಸಂಹಿತೆ ಪಾಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಕಾಲೇಜಿನವರು ಪ್ರಸ್ತಾವನೆಯನ್ನು ಸಲ್ಲಿಸಿದ ನಂತರ ಎರಡು ಕಾಲೇಜುಗಳಿಗೆ ಅನುದಾನ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಡಿ.ಬನುಮಯ್ಯ ಸಂಜೆ ಕಾಲೇಜಿಗೆ ಅನುದಾನ ನೀಡಲು ತಡಮಾಡಲು ಕಾರಣವೇನು ಮತ್ತು ಈ ಕೂಡಲೇ ಅನುದಾನ ನೀಡಲು ಸರ್ಕಾರದವರು ಕ್ರಮಕೈಗೊಳ್ಳುವರೇ?

ಎಸ್.ಎಂ. ಯಾಹ್ಯಾ

(ಉನ್ನತ ಶಿಕ್ಷಣ ಸಚಿವರು)

ಇಲ್ಲ.

ಮೇಲಿನ ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇಲ್ಲ.

ಕಾಲೇಜು ಶಿಕ್ಷಣ ನಿರ್ದೇಶಕರಿಂದ ಸೂಕ್ತ ಪ್ರಸ್ತಾವನೆಗಳು ಸ್ವೀಕೃತವಾದೊಡನೆ ಸರ್ಕಾರದ ನೀತಿಗನುಗುಣವಾಗಿ ಮತ್ತು ಆಯವ್ಯಯದಲ್ಲಿ ಅವಕಾಶವಿರುವ :ಒದಗಿಸಿರುವ ಹಣವನ್ನು ಆಧರಿಸಿ; ಕಾಲೇಜುಗಳನ್ನು ಒಳಪಡಿಸುವ ವಿಷಯವನ್ನು ಪರಿಶೀಲಿಸಲಾಗುವುದು.

ಶ್ರೀ ಟಿ.ಬಿ.ಜಯಚಂದ್ರ :- ಮಾನ್ಯ ಅಧ್ಯಕ್ಷರೇ, ನಾನು ಅನುದಾನ ಮಾನ್ಯತೆ ಕೋರಿ ಶಿಕ್ಷಣ ಇಲಾಖೆಗೆ ಪ್ರಸ್ತಾವನೆ ಕಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ 'ಇಲ್ಲ' ಎಂಬ ಮಾತನ್ನು ಹೇಳಿದ್ದಾರೆ. ಬಹುಶಃ ತಾವು ನಮ್ಮ ನೆರವಿಗೆ ಬರಬೇಕು. 1985ರಲ್ಲಿ ಕಾಲೇಜು ಪರವಾಗಿ ಪ್ರಸ್ತಾವನೆಯನ್ನು ಸಲ್ಲಿಸಿದಮೇಲೆ, ನಾನೇ ಸ್ವತಃ ಹೋಗಿ ನಿಮ್ಮ ಅಸಿಸ್ಟೆಂಟ್ ಡೈರಕ್ಟರ್‌ರೊಡನೆ ಖುದ್ದು ವಿಚಾರ ಮಾಡಿದ್ದೇನೆ. ಅವರು ಏನೆಂದು ಹೇಳಿದರು ಎಂದರೆ ಸರ್ಕಾರದಿಂದಯಾವುದೇ ಪ್ರಸ್ತಾವನೆಯನ್ನು ಸದ್ಯಕ್ಕೆ ಸಲ್ಲಿಸಬೇಡಿ ಎನ್ನತಕ್ಕಂಥ ವರ್ತಮಾನಬಂದಿದೆ ಎಂದು ನನಗೆ ಉತ್ತರ ಹೇಳಿದಂಥ ಸಂದರ್ಭದಲ್ಲಿ ಹೇಳಿದ್ದಾರೆ. ಈ ಇಲಾಖೆಯಲ್ಲಿ ಯಾವುದೇ ಪ್ರಸ್ತಾವನೆ ಅನುದಾನ ಕೋರಿ ಬಂದಿಲ್ಲವೆಂದು ಹೇಳಿದರೆ ಅದು ಸತ್ಯಕ್ಕೆ ದೂರವಾಗುತ್ತದೆ. ಸ್ವತಃ ನಾನು ಹೋಗಿದ್ದೇನೆ. ಸರ್ಕಾರ ಕಳಿಸಿದ್ದನ್ನು ಉದ್ದೇಶಪೂರ್ವಕವಾಗಿ ವಿಳಂಬ ಮಾಡುತ್ತಿದ್ದಾರೆ. ತಾವು ಉತ್ತರ ಕೊಟ್ಟಿದ್ದೀರಿ. ಈಗ ತರಿಸಿ ನೋಡಿ. ಇದರಲ್ಲಿ ಏನಾದರೂ ಪ್ರಸ್ತಾವನೆ ಸಲ್ಲಿಸಿದ್ದರೆ ಯಾವ ತರಹ ಶಿಕ್ಷೆಯನ್ನು ಅವರ ಮೇಲೆ ವಿಧಿಸುತ್ತೀರಿ ಎಂದು ಹೇಳಬೇಕು. ಎರಡನೇಯದಾಗಿ ಈ ಕಾಲೇಜಿನವರು

ಪ್ರಸ್ತಾವನೆ ಸಲ್ಲಿಸಿದ ಮೇಲೆ ಮಂಡ್ಯ ಮತ್ತು ಮಂಗಳೂರಿನ ಎರಡು ಕಾಲೇಜುಗಳಿಗೆ ಅನುದಾನವನ್ನು ಬಿಡುಗಡೆ ಮಾಡಿದ್ದೀರಿ? ಮೈಸೂರಿನ ಒನುಮಲ್ಲ ಕಾಲೇಜಿಗೆ ಯಾಕೆ ತಾರತಮ್ಯ ತೋರಿಸುತ್ತಿದ್ದಿರಿ? ಸತ್ಯಕ್ಕೆ ದೂರವಾದ ಉತ್ತರವನ್ನು ಏತಕ್ಕೋಸ್ಕರ ಸದನದಲ್ಲಿ ಕೊಡುತ್ತೀರಿ?

ಶ್ರೀ ಎಸ್.ಎಂ.ಯಾಹ್ಯಾ :- ಮಾನ್ಯ ಸದಸ್ಯರು 'ಸರ್ಕಾರಕ್ಕೆ ಪ್ರಪೋಸಲ್ ಬಂದಿದೆಯೇ?' ಎಂದು ಕೇಳಿದ್ದಾರೆ.

ಶ್ರೀ ಟಿ.ಬಿ.ಜಯಚಂದ್ರ :-ಇಲ್ಲ. ಶಿಕ್ಷಣ ಇಲಾಖೆ ಅಂತ ಕೇಳಿರುವುದು.

ಶ್ರೀ ಎಸ್ ಎಂ.ಯಾಹ್ಯಾ :-ನಿಮ್ಮ ಪ್ರಶ್ನೆ

" Whether it has come to the notice of the Government.."ಎಂದು ಇದೆ.

ಶ್ರೀ ಟಿ.ಬಿ.ಜಯಚಂದ್ರ :- ಕನ್ನಡದ ಪ್ರತಿಯನ್ನು ನೋಡಿ ನಾನು ಹೇಳುತ್ತಿದ್ದೇನೆ. ಶಿಕ್ಷಣ ಇಲಾಖೆಯಿಂದ ಹಿಡಿದು ಮಂತ್ರಿಯವರೆಗೆ ಸರ್ಕಾರ ಆಗುತ್ತದೆ. ತಾವು ಈ ರೀತಿ ಹೇಳುವುದಾದರೆ, ಮುಂದೆ ಇಲಾಖೆಯೋ, ಸರ್ಕಾರನೋ ಎಂದು ಬೇರೆ ತರಹ ಪ್ರಶ್ನೆ ಕೇಳಬೇಕಾಗುತ್ತದೆ.

ಶ್ರೀ ಎಸ್.ಎಂ.ಯಾಹ್ಯಾ :- ಯಾವರೀತಿ ಕೇಳಿದ್ದಾರೋ, ಆ ರೀತಿ ಉತ್ತರ. ಅದು ನಿಮಗೆ ತೃಪ್ತಿ ಆಗದೇ ಇರಬಹುದು. ಆದರೆ ಇನ್ನೊಂದು ಮಾತು; ಆದರೆ ಸಂಜೆ ಕಾಲೇಜುಗಳಿಗೆ ಅನುದಾನ ಕೊಡಬಾರದು ಎಂದು ನಾನು ಇವತ್ತು ಹೇಳುತ್ತಿದ್ದೇನೆ. ಬಹಳ ವರ್ಷಗಳಿಂದ ನಮ್ಮ ಟೀಚರ್ಸ್ ಕೆಲಸ ಮಾಡಿಕೊಂಡು ಬಂದಂಥ ದೊಡ್ಡ ಕಾಲೇಜುಗಳಿಗೇ ನಾವು ಅನುದಾನ ಕೊಡಲಿಲ್ಲ. ಈವನಿಂಗ್ ಕಾಲೇಜುಗಳಿಗೆ , ಅದೂಪಾರ್ಟ್ ಟೈಮ್ ಇರುವವರಿಗೆ ನನ್ನ ನೀತಿ ಎಂದರೆ ಅವರಿಗೆ ಅನುದಾನ ಕೊಡಬಾರದು. ನಾವು ಹೆಚ್ಚು ಡೇ ಕಾಲೇಜುಗಳಿಗೆ ಉತ್ತೇಜನ ಕೊಟ್ಟು ಉತ್ತಮ ಪಡಿಸಬೇಕಾಗಿದೆ. ಎರಡನೆಯದಾಗಿ, ನಾವು ಓಪನ್ ಯೂನಿವರ್ಸಿಟಿ ಮಾಡಬೇಕೆಂದಿದ್ದೇವೆ. ಯಾವಾಗ ಅದನ್ನು ಮಾಡುತ್ತೇವೋ ಆಗ ಈ ಈವನಿಂಗ್ ಕಾಲೇಜಸ್ ಬೇಡ. ಇದಕ್ಕಿಂತಲೂ ಉತ್ತಮ ಶಿಕ್ಷಣ distance education ಅಲ್ಲಿ ಸಿಗುತ್ತದೆ. ಓಪನ್ ಯೂನಿವರ್ಸಿಟಿಯಲ್ಲಿ ಸಿಗುತ್ತದೆ. ಇಂತಹ ಕಾಲೇಜುಗಳಿಗೆ ಅನುದಾನ ಕೊಡಬಾರದು ಎಂದು ಸರ್ಕಾರದ ನೀತಿ ಇದೆ.

ಶ್ರೀ ಡಿ.ಬಿ.ಜಯಚಂದ್ರ :- ಸರ್ಕಾರದ ನೀತಿ ಪ್ರಕಾರ ಏನು ಮಾಡಿದ್ದೀರೋ, ಏನು ಆಶ್ವಾಸನೆ ಕೊಟ್ಟಿದ್ದೀರೋ ಆ ಪ್ರಕಾರ ನಡೆಯ ಬೇಕು. ಇದು 10-13 ವರ್ಷಗಳಿಂದ ನಡೆಯುತ್ತಾ ಬಂದಿವೆ. ತಾವು ಮಂಡ್ಯಾ, ಮಂಗಳೂರಿನಲ್ಲಿ ಕೊಟ್ಟಿದ್ದೀರಿ. ಇದಕ್ಕೆ ಮಾತ್ರ ಕೊಡುವುದಕ್ಕೆ ಏಕೆ ಆಗಿಲ್ಲ?

ಶ್ರೀ ಎಸ್.ಎಂ.ಯಾಹ್ಯಾ :- ಅಧ್ಯಕ್ಷರೇ, Grant as a right ಎಂದು ಹೇಳಲಿಕ್ಕೆ ಬರಲ್ಲ. ತುಮಕೂರಿನ ಲಾ ಕಾಲೇಜ್ ಕೂಡಾ ಒಳ್ಳೆಯ ಕಾಲೇಜು, 22 ವರ್ಷಗಳಿಂದ ಇದೆ. ಈ ವರೆಗೂ ಅನುದಾನ ಕೊಟ್ಟಿಲ್ಲ. ಬೆಳಗಾಂ ಲಾ ಕಾಲೇಜು 20 ವರ್ಷಗಳಿಂದ ಇದೆ. ಅದಕ್ಕೂ ಕೊಟ್ಟಿಲ್ಲ. It is not a right. But we would like the old prestigious law college should get first than the evening college.

ಶ್ರೀ ಡಿ.ಬಿ.ಜಯಚಂದ್ರ :- ಮಾರ್ಗಸೂಚಿ ಏನು ಕೊಟ್ಟಿದ್ದೀರಿ ಎಂದು ಹೇಳಬೇಕು. 1980ರಲ್ಲಿ ಈ ಕಾಲೇಜು ಪ್ರಾರಂಭವಾಗಿ 13 ವರ್ಷಗಳಲ್ಲಿ ಅಲ್ಲಿಂದ ಸಾವಿರಾರು ಪದವೀಧರರು ಹೊರಬಂದಿದ್ದಾರೆ. ಅದಕ್ಕೆ ಕೊಡುವುದಿಲ್ಲ ಎಂದರೆ ಹೇಗೆ? ದಯಮಾಡಿ ಮಾರ್ಗಸೂಚಿ ತಿಳಿಸಿ. ಈ

ಬಗ್ಗೆ ಯಾವ ರೀತಿ ಮನವಿ ಮಾಡಬೇಕು, ನಿಮ್ಮ ಮನವೊಲಿಸಲು ನಾವು ಏನು ಕೆಲಸ ಮಾಡಬೇಕೆಂದು ದಯಮಾಡಿ ತಿಳಿಸಿ.

ಶ್ರೀ ವೈ.ಕೆ. ರಾಮಯ್ಯ :- ಮಾನ್ಯ ಮಂತ್ರಿಗಳು ತುಮಕೂರು ಲಾ ಕಾಲೇಜು ಬಗ್ಗೆ ಪ್ರಸ್ತಾಪ ಮಾಡಿದರು. ತುಮಕೂರಿನ ಕಾಲೇಜಿಗೆ ಯಾವಾಗ ಅನುದಾನ ಕೊಡುತ್ತಾರೆಂದು ದಯಮಾಡಿ ತಿಳಿಸಬೇಕು. ತುಮಕೂರು ಲಾ ಕಾಲೇಜು ಚೆನ್ನಾಗಿದೆ ಎಂದು ಮಂತ್ರಿಗಳೇ ಒಪ್ಪಿದ್ದಾರೆ.

ಶ್ರೀ ಎಸ್.ಎಂ.ಯಾಹ್ಯಾ :- ಅದಕ್ಕೆ ಅನುದಾನ ಕೊಡುವ ನೀತಿಯನ್ನು ಪ್ರೋಗ್ರಾಮನ್ನು ನಾವು ಹಾಕಿಕೊಂಡಿದ್ದೇವೆ.

ಶ್ರೀ ವೈ.ಕೆ.ರಾಮಯ್ಯ :- ಯಾವಾಗ ಕೊಡುತ್ತೀರೆಂದು ಕೇಳುತ್ತಿದ್ದೇನೆ.

ಅಧ್ಯಕ್ಷರು :- ಈಗ ಮುಂದಿನ ಪ್ರಶ್ನೆ ಶ್ರೀ ಯಡಿಯೂರಪ್ಪನವರದ್ದು. ಈ ಪ್ರಶ್ನೆಗೆ ಸಚಿವರು ಸಮಯ ಕೇಳಿದ್ದಾರೆ.

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ :- ಈ ಪ್ರಶ್ನೆಗೆ ಕಾಲಾವಕಾಶ ಕೇಳಿ ಪತ್ರ ಬರೆದಿದ್ದೇನೆ.

ಶ್ರೀ ಬಿ.ಎಸ್ ಯಡಿಯೂರಪ್ಪ :- ನಾವು ಕೇಳಿದ 50-60 ಪ್ರಶ್ನೆಗಳಲ್ಲಿ ಒಂದು ಪ್ರಶ್ನೆ ಇಲ್ಲಿ ಚುಕ್ಕೆ ಪ್ರಶ್ನೆಯಾಗಿ ಬರುತ್ತದೆ. ಅದಕ್ಕೂ ಸಮಯಾವಕಾಶ ಕೇಳಿದರೆ ಹೇಗೆ? ಇಲ್ಲಿ ಪ್ರಶ್ನೆ ಬಂದಮೇಲೆ ತಾವು ನಮ್ಮ ಸಹಾಯಕ್ಕೆ ಬರಬೇಕು. ಹರಿಜನ ಗಿರಿಜನರ ಮಕ್ಕಳಿಗೆ ಹಾಗೂ ಹಸಿರುಕಾರ್ಡು ಹೊಂದಿರುವ ಕುಟುಂಬದ ಮಕ್ಕಳಿಗೆ ಪ್ರೈಮರಿ ಮತ್ತು ಮಿಡ್ಲ್ ಸ್ಕೂಲ್‌ಗಳಲ್ಲಿ ಉಚಿತವಾಗಿ ಪಠ್ಯಪುಸ್ತಕ ಹಂಚುವ ಯೋಜನೆ ಜಾರಿಯಲ್ಲಿರುವುದೇ ಎಂದು ಪ್ರಶ್ನೆ ಕೇಳಿದ್ದೇನೆ. ಇದು ಇದೆಯೋ ಅಥವಾ ಇಲ್ಲವೋ ಎಂದು ಹೇಳಬೇಕು. ಶಾಲೆಗಳು ಪ್ರಾರಂಭವಾಗಿ 4 ತಿಂಗಳು ಆಗಿದ್ದು ಉಚಿತ ಪುಸ್ತಕ ಹಂಚುತ್ತಾರೆಂದು ಮಕ್ಕಳು ಜಾತಕ ಪಕ್ಷಿ ರೀತಿಯಲ್ಲಿ ಕಾಯುತ್ತಿದ್ದಾರೆ. ಇದನ್ನು ಮುಂದೆ ಹಾಕುವುದು ಏಕೆ? ಉತ್ತರ ಬರದಿದ್ದರೆ ಸರ್ಕಾರಕ್ಕೆ ಬೇಕಾದರೆ ಛೀಮಾರಿ ಹಾಕಿ. ನಾನು ತಮಗೆ ಅಡ್ಡ ಬರುವುದಿಲ್ಲ. ಹರಿಜನರ ಮಕ್ಕಳು ಇವತ್ತು ಸಾಯುತ್ತಿದ್ದಾರೆ. 4 ತಿಂಗಳಿಂದ ಅವರಿಗೆ ಪುಸ್ತಕ ಸಿಕ್ಕಿಲ್ಲ. ಹರಿಜನರ ಉದ್ಧಾರ ಮಾಡುತ್ತೇವೆಂದು ಸರ್ಕಾರ ಹೇಳುತ್ತದೆ.

ಶ್ರೀ ಡಿ.ಬಿ.ಚಂದ್ರೆಗೌಡ :- ಮಾನ್ಯ ಯಡಿಯೂರಪ್ಪನವರೆ, ಒಂದು ನಿಮಿಷ. ವಿವರಗಳನ್ನು ಬೇಕಾದರೆ ನಿಧಾನವಾಗಿ ಕೊಡಲಿ. ಆದರೆ ಪಾಲಿಸಿಯೇನು, ಅದನ್ನಾದರೂ ಹೇಳಬೇಕು. ಅದಕ್ಕೆ ಏಕೆ ಸಮಯ?

ಶ್ರೀ ಬಿ.ಎಸ್.ಯಡಿಯೂರಪ್ಪ : ನಮಗೆ ಏನೂ ಬೇಡ, ಈ ಯೋಜನೆ ಜಾರಿಯಲ್ಲಿದೆಯೇ ಅಥವಾ ಇಲ್ಲವೆ? ಇಲ್ಲವೆಂದರೆ ಮಕ್ಕಳು ಪುಸ್ತಕಗಳನ್ನು ಕೊಂಡುಕೊಳ್ಳುತ್ತಾರೆ. ಶಾಲೆ ಪ್ರಾರಂಭವಾಗಿ 4 ತಿಂಗಳಾಗಿದೆ. ಎಜುಕೇಷನ್ ಮಿನಿಸ್ಟರ್ ಉತ್ತರ ಹೇಳಬೇಕಾಗುತ್ತದೆ. ಇದು ಪಾಲಿಸಿ ಡಿಸಿಷನ್. ಈ ಯೋಜನೆ ಜಾರಿಯಲ್ಲಿದೆಯೇ ಅಥವಾ ಇಲ್ಲವೇ ಎಂಬುದನ್ನು ಹೇಳಬೇಕಾಗುತ್ತದೆ? ಇಲ್ಲದಿದ್ದರೆ ನಾನು ಸರ್ಕಾರದ ನೀತಿಯನ್ನು ಪ್ರತಿಭಟನೆ ಮಾಡಿ ಸಭೆಯಿಂದ ಹೊರಗಡೆ ಹೋಗಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ಬಹಳ ಸುಲಭವಾದ ಪ್ರಶ್ನೆ. ಸುತ್ತಿಬಳಸಿ ಕೇಳತಕ್ಕ ಪ್ರಶ್ನೆಯಲ್ಲ. ಕೊಡುತ್ತಿದ್ದಾರೆಯೇ ಅಥವಾ ಇಲ್ಲವೇ ಎಂಬುದು ಒಂದೇ ಪ್ರಶ್ನೆ ಎಷ್ಟೆಷ್ಟು ಕೊಡುತ್ತಾರೆ ಬಿಡುತ್ತಾರೆ ಆಮೇಲೆ ಬೇಕಾದರೆ ಹೇಳಲಿ; ಕೊಡುತ್ತಿದ್ದೀರಾ ಅಥವಾ ಇಲ್ಲವೇ? ಇಷ್ಟನ್ನು ಹೇಳುವುದಕ್ಕೆ ಈ ಪ್ರಶ್ನೆಯನ್ನು ಮುಂದಕ್ಕೆ ಹಾಕುತ್ತೇವೆಂದು ಹೆಳುವುದಾದರೆ ಇದು

ಮುದ್ರಣವಾಗಿ ಏಕೆ ಬರಬೇಕಾಗಿತ್ತು? ಇದು ಸರಿಯಲ್ಲ. ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಜನಾಂಗದವರಿಗೆ ಬಹಳ ಉಪಕಾರ ಮಾಡುತ್ತೇವೆಂದು ನೀವು ಹೇಳುತ್ತಿದ್ದೀರಿ; ಒಂದು ಪರಿಣಾಮಕಾರಿಯಾದ ರೀತಿಯಲ್ಲಿ ಈ ಸದನದಲ್ಲಿ ಉತ್ತರ ಕೊಡುವುದಕ್ಕೆ ನಿಮ್ಮಲ್ಲಿ ಉತ್ತರವಿಲ್ಲ ಅಂದಮೇಲೆ ನೀವು ಆ ಜನಾಂಗಕ್ಕೆ ಏನು ಅನುಕೂಲ ಮಾಡುವುದಕ್ಕೆಸಾಧ್ಯ? ಇದನ್ನು ನೀವು ಸ್ಪಷ್ಟಪಡಿಸಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ: ಶಾಲೆಗಳು ಪ್ರಾರಂಭವಾಗಿ ನಾಲ್ಕು ತಿಂಗಳಾಗಿವೆ. ಲಕ್ಷಾಂತರ ಹರಿಜನ ಗಿರಿಜನರ ಮಕ್ಕಳಹಾಗೂ ಹಸಿರು ಕಾರ್ಡ್ ಹೊಂದಿರುವವರ ಮಕ್ಕಳ ಗತಿ ಏನು? ಪುಕ್ಕಟೆ ಪುಸ್ತಕ ಕೊಡುತ್ತಾರೆಂದು ಹೇಳಿದ್ದರಿಂದ ಪುಸ್ತಕಗಳನ್ನು ಕೊಂಡುಕೊಳ್ಳದೆ ಇವರುಗಳು ಕಾಯುತ್ತಿದ್ದಾರೆ. ಬೇಜವಾಬ್ದಾರಿ ಸರ್ಕಾರ ಅಧಿಕಾರದಲ್ಲಿದೆ, ಇಂತಹ ಸರ್ಕಾರ ಅಸ್ತಿತ್ವದಲ್ಲಿದೆ ಎನ್ನುವುದಾದರೆ ನಾವು ಈ ಸದನದಲ್ಲಿ ಹೇಗೆ ಸ್ವಾಮಿ ಕೆಲಸ ಮಾಡುವುದು? ನಮಗೆ ಬಹಳ ಕಷ್ಟವಾಗುತ್ತದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ :- ಸರ್ಕಾರದ ನೀತಿ ಹೇಳುವುದಕ್ಕೆ ಸಾಧ್ಯವಿಲ್ಲವೆಂದರೆ ನಾವು ಸದನದಲ್ಲಿ ಕೆಲಸ ಮಾಡುವುದು ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ: ಅವರು ಯಾವ ಕೆಲಸ ಮಾಡುತ್ತಿದ್ದಾರೆ? ಒಂದು ಸಾರಿ ಕೊಶ್ಚನ್ ಅಡ್ಮಿಟ್ ಆದಮೇಲೆ, ಜವಾಬ್ದಾರಿ ಸರ್ಕಾರ ಆದಕ್ಕೆ ಉತ್ತರ ಕೊಡಬೇಕು. ನಾಳೆ ಆ ಮಕ್ಕಳಿಗೆ ನಾನು ಏನು ಉತ್ತರ ಕೊಡಲಿ? ಇಡೀ ಕರ್ನಾಟಕ ರಾಜ್ಯದ ಎಲ್ಲ ಹರಿಜನಗಿರಿಜನರ ಹಾಗೂ ಹಸಿರು ಕಾರ್ಡು ಹೊಂದಿರುವವರ ಮಕ್ಕಳ ಪ್ರಶ್ನೆ ಇದು. ಉತ್ತರ ಇದೆ. ಆದರೆ ನಿಮಗೆ ಕೊಡುವುದಕ್ಕಾಗುತ್ತಿಲ್ಲ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ :- ಮಾನ್ಯ ಅಧ್ಯಕ್ಷರೇ, ಈಗ ಈ ಕಾರ್ಯಕ್ರಮವನ್ನು ರದ್ದುಗೊಳಿಸಿಲ್ಲ. ಇದನ್ನು ಮುಂದುವರಿಸಿದ್ದೇವೆ. ಮೊದಲನೆಯ ಪ್ರಶ್ನೆಗೆ ನಾನು ಉತ್ತರ ಕೊಡುತ್ತೇನೆ. ದಿನಾಂಕ 1-7-93ರಂದು ಹಣವನ್ನು ಸಹ ಬಿಡುಗಡೆ ಮಾಡಿದ್ದೇವೆ. ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ ಎನ್ನುವ ವಿವರ ಇಲ್ಲ. ಅದಕ್ಕಾಗಿ ಕಾಲಾವಕಾಶವನ್ನು ಕೇಳಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೇ, ಹಾಗಾದರೆ ನಾಳೆ ಅರ್ಧಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ. ಇಲ್ಲದಿದ್ದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಮಕ್ಕಳ ಬಗ್ಗೆ ಇವರಿಗೆ ಕಳಕಳಿಯಿಲ್ಲವೆಂದು ಇದನ್ನು ಪ್ರತಿಭಟನೆ ಮಾಡಿ ನಾನು ಸಭೆಯಿಂದ ಹೊರಗಡೆ ಹೋಗಬೇಕಾಗುತ್ತದೆ. ಈ ತರಹ ಬೇಜವಾಬ್ದಾರಿ ಉತ್ತರವನ್ನು ಕೊಟ್ಟರೆ ಹೇಗೆ? ನೀವು ನಮ್ಮ ರಕ್ಷಣೆಗೆ ಬರಬೇಕು.

ಶ್ರೀ ವಾಟಾಳ್ ನಾಗರಾಜ್ : ಅರ್ಧಗಂಟೆ ಚರ್ಚೆಗೆ ಅವಕಾಶ ಕೊಡಿ, ಇದು ಪ್ರಮುಖವಾದ ಪ್ರಶ್ನೆ. ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗಗಳವರ ಬಗ್ಗೆ ಸರ್ಕಾರದ ನೀತಿಯೇನು?

ಶ್ರೀ ಬಿ.ಎಸ್. ಯಡಿಯೂರಪ್ಪ: ನನ್ನ ಸ್ಥಾನದಲ್ಲಿದ್ದರೆ ನೀವು ಹೇಗೆ ಕೆಲಸ ಮಾಡುತ್ತಿದ್ರಿ? ನಾನು ಹೇಗೆ ಕೆಲಸ ಮಾಡಲಿ? ತಾವು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ.

Mr. Speaker: We will take it up next time.

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ :- ನಾವು ಆ ಕಾರ್ಯಕ್ರಮವನ್ನು ಮುಂದುವರೆಸಿದ್ದೇವೆ. ವಿವರಗಳು ಬೇಕಾದರೆ ಸ್ವಲ್ಪ ಕಾಲಾವಕಾಶ ಕೊಡಿ, ನಾನು ಹೇಳುತ್ತೇನೆ. ಇಲ್ಲಿ ನನ್ನ ಹತ್ತಿರ ಏನೂ ಮಾಹಿತಿಯಿಲ್ಲದೆ ನಾನು ಏನು ಹೇಳಬೇಕು?

ಅಧ್ಯಕ್ಷರು :- ಮಾನ್ಯ ವಾಟಾಳ್‌ನಾಗರಾಜ್‌ರವರೆ, ತಾವು ಕುಳಿತುಕೊಳ್ಳಿ.

ಶ್ರೀ ಬಿ.ಎಸ್ ಯಡಿಯೂರಪ್ಪ :- ಬರೀ ಪೊಳ್ಳು ಘೋಷಣೆಗಳನ್ನು ಮಾಡುತ್ತಿದ್ದೀರಿ, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗದವರ ಬಗ್ಗೆ ನಿಮಗೆ ಕಳಕಳಿಯಿಲ್ಲ, ಅವರ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಕಳಕಳಿಯಿಲ್ಲ. ಪೊಳ್ಳು ಕಾರ್ಯಕ್ರಮಗಳನ್ನು ಘೋಷಣೆ ಮಾಡಿದ್ದೀರಿ, ಇದಕ್ಕೆ ನೀವು ಉತ್ತರ ಹೇಳುವುದಿಲ್ಲ ಎಂದರೆ ನಾವು ಇಲ್ಲಿ ಕೆಲಸ ಮಾಡವುದಕ್ಕಾಗುವುದಿಲ್ಲ. ನಾವು ಜನರಿಗೆ ಉತ್ತರ ಕೊಡ ಬೇಕಾಗುತ್ತದೆ.

ಅಧ್ಯಕ್ಷರು :- ಈ ರೀತಿ ಮಾಡಬೇಡಿಯೆಂದು ನಾನು ಸರ್ಕಾರಕ್ಕೆ ಹೇಳುತ್ತೇನೆ.

ವಿಷಯ :- ಬಿಎಸ್ಸಿ (ಅರಣ್ಯಶಾಸ್ತ್ರ) ಪದವೀಧರರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 106(568)

ಶ್ರೀ ಎ.ಎಂ.ಬೆಳ್ಳಿಯಪ್ಪ(ಸೋಮವಾರಪೇಟೆ)

ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1985ನೇ ಇಸವಿಯಲ್ಲಿ ಕರ್ನಾಟಕದ ಎರಡು ಕೃಷಿ ವಿಶ್ವ ವಿದ್ಯಾನಿಲಯಗಳಲ್ಲಿ ಬಿ.ಎಸ್ಸಿ(ಅರಣ್ಯಶಾಸ್ತ್ರ) ವೃತ್ತಿಪರ ಪದವಿಯನ್ನು ಪ್ರಾರಂಭಿಸಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಆ) ಹಾಗಿದ್ದರೆ, ಆ ಪದವೀಧರರ ಭವಿಷ್ಯದ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ನಾಲ್ಕು ವರ್ಷಗಳ ಕಾಲ ಅರಣ್ಯ ಶಾಸ್ತ್ರವನ್ನೇ ಓದುವ ಈ ಪದವೀದರರು ಅರಣ್ಯ ಇಲಾಖೆಯಲ್ಲಿನ ವಲಯ ಅರಣ್ಯಾಧಿಕಾರಿ(ಆರ್.ಎಫ್.ಓ) ಹುದ್ದೆಗಳಿಗೆ ಇತರ ಪದವೀಧರರ ಜೊತೆ ಸ್ಪರ್ಧಿಸಬೇಕಾಗಿರುವಾಗ ಈ ಪದವಿ ಕಾರ್ಯಕ್ರಮವನ್ನು ಪ್ರಾರಂಭಿಸಿದ ಔಚಿತ್ಯವಾದರೂ ಏನು?

ಈ) ಈ ಪದವೀಧರರಿಗೆ ಬೇರೆ ಇಲಾಖೆಗಳಾದ ಕೃಷಿ, ತೋಟಗಾರಿಕೆ, ರೇಷ್ಮೆ ಮುಂತಾದ ಇಲಾಖೆಗಳಲ್ಲಿ ಉದ್ಯೋಗ ಅವಕಾಶಗಳಿಲ್ಲದಿರುವಾಗ ಅರಣ್ಯ ಇಲಾಖೆಯಲ್ಲಿನ ವಲಯ ಅರಣ್ಯಾಧಿಕಾರಿ(ಆರ್.ಎಫ್.ಓ) ಹುದ್ದೆಗಳನ್ನು ಬಿ.ಎಸ್.ಸಿ. (ಅರಣ್ಯ ಶಾಸ್ತ್ರ) ಪದವೀಧರರಿಗೇ ಮೀಸಲಾಗಿಡಲು ಅವಶ್ಯಕವಾದ ಸಿಬ್ಬಂದಿ ಮತ್ತು ನೇಮಕಾತಿ ಕಾಯ್ದೆಗೆ ಸೂಕ್ತ ತಿದ್ದುಪಡಿ ಮಾಡಲಾಗುವುದೇ?

ಶ್ರೀ ಎಂ.ಪಿ. ಕೇಶವಮೂರ್ತಿ
(ಅರಣ್ಯ ರಾಜ್ಯ ಮಂತ್ರಿಗಳು)

ತಿಳಿದಿದೆ.

ಅರಣ್ಯ ಇಲಾಖೆಯ ವಲಯ ಅರಣ್ಯಾಧಿಕಾರಿಗಳ ಹುದ್ದೆಗೆ ಆಯ್ಕೆಯಾಗಲು ಅವಶ್ಯವಿರುವ ವಿದ್ಯಾರ್ಹತೆಯಲ್ಲಿ ಅರಣ್ಯ ಶಾಸ್ತ್ರದ ಪದವೀಧರರಿಗೆ ಅವಕಾಶ ನೀಡಲು ಪರಿಶೀಲಿಸಲಾಗುತ್ತಿದೆ. ಇದಲ್ಲದೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗೆ ನೇಮಕಗೊಳ್ಳಲು ಬೇಕಾದ ಅರಣ್ಯ ವಿಷಯದ ಡಿಪ್ಲೊಮೋ ಕೋರ್ಸಿಗೆ ಲೋಕ ಸೇವಾ ಆಯೋಗ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗೆ ಅರ್ಹರಾಗಲು ಸಹ ಅರಣ್ಯ ಶಾಸ್ತ್ರದ ಪದವೀಧರರಿಗೆ ಅವಕಾಶ ನೀಡಲು ಪರಿಶೀಲಿಸಲಾಗುತ್ತಿದೆ.

ಜಿ.ವಿ.ಕೆ. ರಾವ್ ಸಮಿತಿಯ ವರದಿಯು ವಲಯ ಅರಣ್ಯಾಧಿಕಾರಿಗಳ ಹುದ್ದೆಗೆ ಬಹುವಿಧ ವಿಜ್ಞಾನದ ಪದವೀಧರರಿಂದ ಆಯ್ಕೆ ಮಾಡುವುದೇ ಸೂಕ್ತವೆಂದು ಶಿಫಾರಸ್ಸು ಮಾಡಿದೆ. ಇದಲ್ಲದೆ ಈ ಸದ್ಯ ಬಿ.ಎಸ್ಸಿ (ಫಾರೆಸ್ಟ್ರಿ) ಪದವೀಧರರ ಸಂಖ್ಯೆ ಕಡಿಮೆ ಇರುವುದರಿಂದ ಈ ಹುದ್ದೆಗಳನ್ನು ಅವರಿಗೆ